1	2	3	4	5	6
ಭಾಲ್ಕಿ	222	ಬೆಂಗಳೂರು–ಭಾಲ್ಕಿ (ರಾಜಹಂಸ)	18.45 ಬೆಂಗಳೂರು	11.15 ಭಾಲ್ಕಿ	ಹೈದ್ರಾಬಾದ್
ಬಸವಕಲ್ಯಾಣ	221	ಬಸವಕಲ್ಯಾಣ–ಬೆಂಗಳೂರು (ವೇಗದೂತ)	10.30 ಬಸವಕಲ್ಯಾಣ	04.15 ಬೆಂಗಳೂರು	ಗುಲ್ಬರ್ಗಾ ಹೊಸಪೇಟೆ
ಬಸವಕಲ್ಯಾಣ	222	ಬೆಂಗಳೂರು–ಬಸವಕಲ್ಯಾಣ (ವೇಗದೂತ)	13.30 ಬೆಂಗಳೂರು	07.00 ಬಸವಕಲ್ಯಾಣ	ಹೊಸಪೇಟೆ ಗುಲ್ಬರ್ಗಾ
ಬಸವಕಲ್ಯಾಣ	229	ಬಸವಕಲ್ಯಾಣ–ಬೆಂಗಳೂರು (ರಾಜಹಂಸ)	13.00 ಬಸವಕಲ್ಯಾಣ	06.15 ಬೆಂಗಳೂರು	ಹೈದ್ರಾಬಾದ್
ಬಸವಕಲ್ಯಾಣ	230	ಬೆಂಗಳೂರು–ಬಸವಕಲ್ಯಾಣ (ರಾಜಹಂಸ)	16.30 ಬೆಂಗಳೂರು	09.45 ಬಸವಕಲ್ಯಾಣ	ಹೈದ್ರಾಬಾದ್

546(739) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಇರುವ ಕೆರೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಈ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದ್ದು, ಜನರಿಗೆ ಉಪಯುಕ್ತವಾಗುತ್ತಿದೆ; ಹಾಗೂ ಎಷ್ಟು ಕೆರೆಗಳು ನೀರಿಲ್ಲದೆ ಬತ್ತಿ ಹೋಗಿ ನಿಷ್ಕ್ರಿಯವಾಗಿವೆ;

ಇ) ಈ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

ಈ) ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ;

ಉ) ಸರ್ವೆ ಕಾರ್ಯವನ್ನು ಮುಗಿಸಿ ಹಲವಾರು ವರ್ಷಗಳಾಗಿದ್ದರೂ ಹೊಸ ಕೆರೆಗಳನ್ನು ನಿರ್ಮಿಸುವ ಕಾರ್ಯವನ್ನು ತೆಗೆದುಕೊಳ್ಳದಿರುವುದು ನಿಜವಲ್ಲವೇ: ಹಾಗೂ ಇದಕ್ಕೆ ಕಾರಣಗಳೇನು;

ಊ) ಔರಾದ್ ತಾಲ್ಲೂಕಿನಲ್ಲಿ ಜನ ಜಾನುವಾರುಗಳಿಗೆ ತೀವ್ರವಾದ ನೀರಿನ ಕೊರತೆ ಇರುವುದರಿಂದ ಈಗಾಗಲೇ ಸರ್ವೆ ಕಾರ್ಯ ಪೂರ್ಣಗೊಂಡಿರುವ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ;

ಋ) ಪ್ರಸಕ್ತ ಆಯವ್ಯಯದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸ ಲಾಗುವುದು; ಹಾಗೂ ಇದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ 28 ಕೆರೆಗಳಿವೆ.

ಆ) ದಿನಾಂಕ 22–7–04ರಂದು ಎಲ್ಲಾ ಕೆರೆಯಲ್ಲಿ ನೀರು ತೂಬಿನ ಮಟ್ಟದ ಕೆಳಗೆ ಇರುತ್ತದೆ.

ಇ) ರೈತ ಕಾಯಕ ಕೆರೆ ಅಡಿಯಲ್ಲಿ 3 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಈ) ಆಲೂರು ಬೇಲೂರು ಕೆರೆ ಪ್ರಗತಿಯಲ್ಲಿದೆ ಹಾಗೂ ಬೆಂಬ್ರಾ ಕೆರೆ ನಿರ್ವಹಿಸಲು ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ.

ಉ) ಅನುದಾನದ ಕೊರತೆ.

ಊ) ಅನುದಾನದ ಲಭ್ಯತೆ ಮೇಲೆ ಆಧಾರವಾಗಿರುತ್ತದೆ.

ಋ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

547(741) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಚಾವತ್ ತೀರ್ಪಿನ ಅನ್ವಯ ಗೋದಾವರಿ ಬೇಸಿನ್‌ನಿಂದ ರಾಜ್ಯದ (ಕರ್ನಾಟಕ) ಪಾಲಿಗೆ ಎಷ್ಟು ಟಿ.ಎಂ.ಸಿ. ನೀರು ಬರಬೇಕಾಗಿದೆ;

ಆ) ಈ ನೀರಿನಲ್ಲಿ ಈಗ ನಿಜಾಂ ಸಾಗರದ ಹೊರಗೆ ಮತ್ತು ಒಳಗೆ ಹರಿಯುತ್ತಿರುವ ನೀರಿನ ಪ್ರಮಾಣವೆಷ್ಟು;

ಇ) ರಾಜ್ಯದ ಪಾಲಿನ ನೀರನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

ಈ) ರಾಜ್ಯದ ಪಾಲಿನ ನೀರಿನ ಬಳಕೆಗಾಗಿ ಕಾಲಮಿತಿಯನ್ನೇನಾದರೂ ನಿಗದಿಪಡಿಸಲಾಗಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಸಮಯದೊಳಗಾಗಿ ನಮ್ಮ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಬೇಕಾಗಿದೆ;

ಊ) ಈ ನೀರಿನ ಉಪಯೋಗ ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕಿಗೆ ಲಭ್ಯವಾಗಲಿದೆ;

ಋ) ಈ ನೀರಿನ ಬಹುಪಾಲು ಉಪಯೋಗ ಔರಾದ್ ತಾಲ್ಲೂಕಿಗೆ ಆಗುವುದರಿಂದ ನಮ್ಮ ರಾಜ್ಯದ ಪಾಲಿನ ನೀರನ್ನು ಸಂಗ್ರಹಿಸಲು ಮಿನಿ ಡ್ಯಾಂಗಳನ್ನಾಗಲ್ಲಿ ಬ್ಯಾರೇಜ್‌ಗಳನ್ನಾಗಲಿ ಅಥವಾ ಕೆರೆಕಟ್ಟೆಗಳನ್ನಾಗಲಿ ನಿರ್ಮಿಸಲಾಗಿದೆಯೇ;